Online Newspaper Clipping Service


THE NEW INDIAN EXPRESS

**Dtd-Sunday, 12th, November- 2017** **Pg.No.05**


# Govt will amend Act to rein in private varsities

RASHMI BELUR @ Bengaluru

IN the light of the Alliance University fracas where students have been affected due to a dispute between two brothers over ownership of the institute, the state government has decided to amend the Karnataka Education Act so that it can intervene in such cases. Presently, there is no provision under the Act for the government to interfere or initiate action against private universities.

Higher Education Minister Basavaraj Rayareddi said, "To protect the interest of students, the government need to intervene and when issues become serious, like in the Alliance case, we should takeover the institute. As there is no such option under the existing Act, we will bring in general amendments which will apply to all private universities in the state."

The minister said he is convening a meeting with his department officials on Monday and plans to place the amendments in the upcoming Assembly sessions scheduled to begin in Belagavi from November 13. "I will discuss with my department officials and try to place amendments in the winter sessions itself," said Rayareddi.

Rayareddi also ensured of legal action against Alliance University for disrupting academic schedules of students. "I will even discuss with the Law Department about initiating legal action. Once it is finalised, we will issue notice to them," he said.

There are over 10 private universities in the state.

### NUMEROUS COURT ORDERS

Basavaraj Rayareddi said the numerous court orders on the Alliance issue had left the government helpless at one point. Explaining this, he said, "There are at least five orders from different courts. We do not know which one to follow. There are stays given in favour of one brother by one court, and in the same case, another court rules against that person. The department is really confused which order to follow."

## Not deemed, it should be deemed-to-be varsities: UGC

Bengaluru: The University Grants Commission (UGC) has asked deemed-to-be universities across the country to not to use the word "university". Following a directive from the Supreme Court on November 3, UGC has issued a circular asking all such institutions to use "deemed-to-be university" and not call themselves "deemed university". All such institutions have been asked to submit a compliance report within 15 days. In cases where the central government notification is with the word 'university', the deemed-to-be universities may submit a proposal with alternative name (without using the word 'university') to the UGC/Ministry of HRD so that necessary amendments can be made by the Ministry of HRD, said UGC.

ಸಂಯುಕ್ತ ಕರ್ನಾಟಕ



# ವೃತ್ತಿಶಿಕ್ಷಣ ಪ್ರವೇಶಕ್ಕೆ ಹೊಸ ಪರೀಕ್ಷೆ ವಿಧಾನ

- ಗೊಂದಲ ನಿವಾರಣೆಗೆ ನೂತನ ಕ್ರಮ
- ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸ್ಥಾಪನೆ
- ಬಹು ಪರೀಕ್ಷಾ ಪದ್ಧತಿಗೆ ತಿಲಾಂಜಲಿ
- ಎನ್‌ಟಿಎಗೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷಾ ಹೊಣೆ
- ಭಾರತೀಯ ಸೊಸೈಟಿ ಕಾಯ್ದೆಯಡಿ ಎನ್‌ಟಿಎ ನೊಂದಣಿ

ನವದೆಹಲಿ: ಎಂಜಿನಿಯರಿಂಗ್, ವೈದ್ಯಕೀಯ ಮತ್ತು ಇತರ ವೃತ್ತಿಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆ ನಡೆಸುವಲ್ಲಿ ಉಂಟಾಗಿರುವ ಗೊಂದಲ ಮತ್ತು ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಮುಂದಾಗಿರುವ ಕೇಂದ್ರ ಸರ್ಕಾರ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ- ಎನ್‌ಟಿಎ) ರಚಿಸಬೇಕೆಂಬ ಪ್ರಸ್ತಾವನೆಗೆ ಹಸಿರು ನಿಶಾನೆ ತೋರಿದೆ.

ಕೇಂದ್ರದ ಈ ನಿರ್ಧಾರದಿಂದ ಪ್ರವೇಶ ಪರೀಕ್ಷೆ ನಡೆಸಲು ಸ್ವಾಯತ್ತಸಂಸ್ಥೆಯೊಂದಕ್ಕೆ ಅಧಿಕಾರ ನೀಡುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಜತೆಗೆ ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು ನಡೆಸುವ ಕ್ಲಿಷ್ಟಕರ ಹೊಣೆಗಾರಿಕೆ ಹೊರೆಯಿಂದ ಸಿಬಿಎಸ್‌ಸಿ, ಎಐಸಿಟಿಇ ಮತ್ತು ಇತರ ಸಂಸ್ಥೆಗಳಿಗೆ ನಿರಾಳ ಸಿಕ್ಕಿದಂತಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು. ಉನ್ನತ ಮಟ್ಟದ ವಿಶ್ವಾಸಾರ್ಹತೆ, ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಮಾಪನ ಮಾಡುವ ಐಚ್ಛಿಕ, ಬುದ್ಧಿಮತ್ತೆ ಮತ್ತು ಇತರ ವಿಷಯಗಳಲ್ಲಿ ತಲೆದೋರುವ ಸಮಸ್ಯೆಗಳನ್ನು ಮೌಲ್ಯಾಂಕನ ಮಾಡಿ ಪ್ರಕ್ರಿಯೆ ಸರಳೀಕರಿಸುವ ಹೊಣೆಗಾರಿಕೆ ಹೊಸದಾಗಿ ರಚನೆಯಾಗಲಿರುವ ಎನ್‌ಟಿಎ ಮೇಲಿರುತ್ತದೆ.

ಮಂಡಳಿ ಪರೀಕ್ಷೆಗಳನ್ನು ಹೊರತುಪಡಿಸಿ, ಜಂಟಿ ಎಂಜಿನಿಯರಿಂಗ್ ಪರೀಕ್ಷೆ (ಜೆಇಇ), ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್), ಯುಜಿಸಿಯ ರಾಷ್ಟ್ರೀಯ ಅರ್ಹತಾ ಪರೀಕ್ಷೆ, ಕೇಂದ್ರೀಯ ಶಿಕ್ಷಕರ ಅರ್ಹತಾ ಪರೀಕ್ಷೆ ಹಾಗೂ ಜವಾಹರ್ ನವೋದಯ ವಿದ್ಯಾಲಯಗಳ ಪ್ರವೇಶ ಪರೀಕ್ಷೆಗಳ ಉಸ್ತುವಾರಿಯನ್ನು ಎನ್‌ಟಿಎ ವಹಿಸಲಿದೆ.

ಭಾರತೀಯ ಸೊಸೈಟಿಗಳ ನೋಂದಣಿ ಕಾಯ್ದೆ, 1869ರ ಅಡಿ ಎನ್‌ಟಿಎಯನ್ನು ಒಂದು ಸಂಸ್ಥೆಯಾಗಿ ನೋಂದಾವಣೆ ಮಾಡಲಾಗುವುದು ಹಾಗೂ ಅದಕ್ಕೆ ಸ್ವಾಯತ್ತ ಸ್ಥಾನಮಾನ ನೀಡಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪರೀಕ್ಷೆಗಳನ್ನು ಪಾರದರ್ಶಕ ಮತ್ತು ನ್ಯಾಯಸಮ್ಮತವಾಗಿ ನಡೆಸಲು ಅನುವು ಮಾಡಿಕೊಡಲಾಗುವುದು. ಭವಿಷ್ಯದಲ್ಲಿ ಹಂತ ಹಂತವಾಗಿ ಎನ್‌ಟಿಎ ಇತರ ಪ್ರವೇಶ ಪರೀಕ್ಷೆಗಳನ್ನೂ ನಡೆಸುವ ಹೊಣೆಗಾರಿಕೆ ವಹಿಸಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.